ಅಧಿಕಾರಿಗಳಿಗೆ ಇವರ ಮಂತಕ್ಷೇತ್ರ ಗೊತ್ತಿಲ್ಲವೇ ? If they do not know the constituency, how can we expect that the constituency will develop.

ಶ್ರೀ ಎಂ. ಎಸ್. ಪಾಟೀಲ್.— ತನಗೆ ಕೊಟ್ಟ ಉತ್ತರ ಸರಿಯಾಗಿಲ್ಲ ಸದಸ್ಯರು ಹೇಳ್ತಿದ್ದಾರೆ.

ಅಧ್ಯಕ್ಷರು.— ತಾವುಗಳು ಅವರ ಪರವಾಗಿ ವಕಾಲತ್ತು ಮಾಡುತ್ತಿದ್ದೀರಿ. ತಾವುಗಳು ಬೇಕಾದರೆ ಇದನ್ನು ಅರ್ಧಗಂಟೆಯಂ ಚರ್ಚೆಗೆ ಕಳುಹಿಸಿ ಕೊಡಿ, ವಿವರಗಳನ್ನು ತರಿಸಿಕೊಡಬಹುದು.

ಸಂಚಾರಿ ಆರಕ್ಷರ ಕೊರತೆಯಿಂದಾಗಿ ಮಂಗಳೂರಿನಲ್ಲಿ ಸಂಚಾರಿ ಅಸ್ತವ್ಯಸ್ತ ಗೊಂಡಿರುವುದು,

೧೫೪೪. ಶ್ರೀ ಬ್ಲೇಸಿಯಸ್ ಎಂ. ಡಿ· ಸೌಜ (ಮಂಗಳೂರು).— ಮಾನ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಂಗಳೂರು ನಗರದಲ್ಲಿ ಸಾಕಷ್ಟು ಸಂಚಾರಿ ಪೋಲೀಸರ ಸಂಖ್ಯೆ ಇಲ್ಲದೇ ಸಂಚಾರದಲ್ಲಿ ಅಡಚಣೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದರೆ ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಹೌದು.

ಆ) ಸಂಚಾರಿ ಪೋಲೀಸ್ ಸಿಬ್ಬಂದಿಯನ್ನು ಹೆಚ್ಚಿಸುವ ಸಲುವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.

SRI BLASIUS M. D. SOUZA.— I would like to know the present strength of the traffic police in Mangalore city and what is the required strength ? When the Govt. is going to fillup these vacancies ?

SRI B RACHAIAH.— The member of accidents...

AN. HON. MEMBER.— He is asking about the strength of Police.

SRI B. RACHAIAH.— In Mangalore the present strength of the city taffic police is; 1 CPI, 2 PSI, 6 SCs, 76 PCs. This is the traffice police strength allocated to that area.

SRI BLASIUS D'SOUZA.— I would like to know the requird strengths of the Manglore city traffic police. Also, when the Hon. Minister is going to fill up the vacancies ?

SRI B. RACHAIAH.— This year, I have already mentioned in my reply to demands that certain number of posts will be created for this area and I will see that the staff required is provided for.

ಬಂಟ್ವಾಳ ಟೌನ್‌ನಲ್ಲಿ ಹೊಸ ಆರಕ್ಷಕರ ವಸತಿ ಗೃಹವನ್ನು ನಿರ್ಮಿಸುವುದು.

೧೫೬೭. ಶ್ರೀ ರಮಾನಾಥ ರೈ (ಬಂಟ್ವಾಳ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಂಟ್ವಾಳದ ಪೋಲೀಸ್ ವಸತಿ ಗೃಹವು ನಾ ದುರಸ್ತಿಯಲ್ಲಿದ್ದು ಅದರಲ್ಲಿ ವಾಸಿಸುವುದೇ ಕಷ್ಟ ಸಾಧ್ಯವಾಗಿರುವುದು ಸರ್ಕಾರದ ಗಮನದಲ್ಲಿದೆಯೆ ?

ಅ) ಹಾಗಿದ್ದಲ್ಲಿ ಸದರಿ ವಸತಿ ಗೃಹವನ್ನು ಸಂಪೂರ್ಣ ದುರಸ್ತಿ ಮಾಡಿಸುವುದಿಲ್ಲವೆ ನೂತನ ವಸತಿ ಗೃಹಗಳನ್ನು ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೆ ?

ಇ) ಹಾಗಿದ್ದಲ್ಲಿ ಈ ಕಾರ್ಯವನ್ನು ಯಾವಾಗ ಆರಂಭಿಸಲಾಗುವುದು ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು).—

ಅ) ಈಗ ಹಾಲಿ ಇರುವ ೧೪ ವಸತಿ ಗೃಹಗಳ ದುರಸ್ತಿಗಾಗಿ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಆ) ಹಣದ ಕೊರತೆಯಿಂದ, ಹೊಸದಾಗಿ ೩ ಮುಂಖ್ಯ ಪೇದೆ ಮತ್ತು ೨೦ ಪೇದೆಗಳ ವಸತಿ ಗೃಹಗಳನ್ನು (ಬಂಟ್ವಾಳದ ಉಳಿದ ಅರಕ್ಷಕ ಸಿಬ್ಬಂದಿಗೆ) ನಿರ್ಮಿಸಲು ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮದವರು ತಮ್ಮ ಯೋಜನೆಯಲ್ಲಿ ಹಂತ ಹಂತವಾಗಿ ನಿರ್ಮಿಸುವ ಯೋಜನೆಯನ್ನು ಹೊಂದಿದೆ.

ಇ) ಈ ಕೆಲಸವನ್ನು ಕರ್ನಾಟಕ ಪೋಲೀಸ್ ಗೃಹ ನಿರ್ಮಾಣ ನಿಗಮದವರು ತಮ್ಮ ಯೋಜನೆಯಲ್ಲಿ ಸಧ್ಯದಲ್ಲೇ ತೆಗೆದುಕೊಳ್ಳುವ ಯೋಜನೆ ಹೊಂದಿರುತ್ತಾರೆ.

ಶ್ರೀ ರಾಮನಾಥ ರೈ.—ಮಾನ್ಯ ಅಧ್ಯಕ್ಷರೇ ಬಂಟ್ವಾಳ ಪೋಲೀಸ್ ಠಾಣೆಯ ವಸತಿ ಗೃಹ ಬಹಳ ಹೀನ ಸ್ಥಿತಿಯಲ್ಲಿದೆ. ಈ ವಸತಿ ಗೃಹ ಬಂಟ್ವಾಳದ ಮಧ್ಯೆ ಪ್ರದೇಶದಲ್ಲಿ ಇದ್ದು ಅಲ್ಲಿನ ವಸತಿ ಗೃಹ ಗಳೆಲ್ಲಾ ಬಿದ್ದು ಹೋಗುವಂತಹ ಸ್ಥಿತಿಗೆ ಬಂದಿವೆ. ಮತ್ತೆ ಕೆಲವು ಮನೆಗಳ ಗೋಡೆಗಳು ಸಹ ಬಿದ್ದು ಹೋಗಿರುವುದರಿಂದ ಅಲ್ಲಿನ ನೌಕರರು ವಾಸ ಮಾಡಲು ಬಹಳ ಕಷ್ಟವಾಗಿದೆ. ಮತ್ತು ನೆರೆ ಬಂದಾಗ ಇವರು ಬಹಳ ತೊಂದರೆ ಪಡುತ್ತಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಮಾನವೀಯ ದೃಷ್ಟಿಯಿಂದ ಆದಷ್ಟು ಬೇಗ ಈ ವಸತಿ ಗೃಹಗಳ ರಿಪೇರಿ ಕೆಲಸ ಮಾಡಿಸಿಕೊಡುವರೇ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಈಗಾಗಲೇ ಅಲ್ಲಿ ರಿಪೇರಿ ಕೆಲಸವನ್ನು ಪ್ರಾರಂಭ ಮಾಡಿಸಿದ್ದೇನೆ. ಒಬ್ಬ ಎಸ್.ಐ. ಮನೆಯನ್ನು ಈಗಾಗಲೇ ರಿಪೇರಿ ಮಾಡಿಸಿ ಅವರು ಆ ಮನೆಗೆ ಬಂದಿದ್ದಾರೆ. ಇನ್ನು ಉಳಿದಿರತಕ್ಕಂಥ ಮನೆಗಳನ್ನು ಸಹ ರಿಪೇರಿ ಮಾಡಿಸಿಕೊಡುತ್ತೇವೆ. ಮತ್ತೇ ಈ ವರ್ಷ ೩ ಜನ ಹೆಡ್ ಕಾನ್‌ಸ್ಟೇಬಲ್‌ರಿಗೆ ಮತ್ತು ೨೦ ಜನ ಪಿ.ಸಿ. ಗಳಿಗೆ ಮನೆಗಳನ್ನು ಕಟ್ಟಿಸಿ ಕೊಡ ಬೇಕೆಂದು ಹೇಳಿ ಗೃಹ ನಿರ್ಮಾಣ ಮಂಡಲಿಯವರಿಗೆ ಹೇಳಿದ್ದೇನೆ, ಮುತ್ತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೪೪ ಕ್ವಾಟ್ರಸ್‌ಗಳನ್ನು ಕಟ್ಟಿಸಿಕೊಡಬೇಕೆಂದು ಹೇಳಿ ಸುಮಾರು ೧.೮೮ ಕೋಟಿ ರೂಪಾಯಿ ಗಳ ಒಂದು ಅಂದಾಜನ್ನು ಕಟ್ಟಿಸಿ ಕೊಡಬೇಕೆಂದು ಹೇಳಿದ್ದೇನೆ.

ಪ್ರಶ್ನೆ ಸಂಖ್ಯೆ. ೫೬೧ (೧೭೧೧)

(ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಪ್ರಶ್ನೆ ಸಂಖ್ಯೆ. ೫೬೨ (೧೭೧೪)

(ಮಾನ್ಯ ಸದಸ್ಯರ ಪ್ರಶ್ನೆಯನ್ನು ಮುಂದೂಡಲಾಗಿದೆ)

ಬಿಜಾಪುರ ನಗರದಲ್ಲಿ ವ್ಯವಸಾಯ ಉತ್ಪನ ಮಾರುಕಟ್ಟೆ ಸಮಿತಿಯ ಪ್ರದೇಶದಲ್ಲಿ ಆರಕ್ಷಕ ಠಾಣೆಯು ಮಂಜೂರಾತಿ.

೧೭೬೭. ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಮಾನ್ಯ ಗೃಹ ಮಂತ್ರಿಗಳು ಈ ಕೆಳ ಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪ ರಲ್ಲಿ ಬಿಜಾಪುರದ ಎ. ಪಿ. ಎಂ. ಸಿ. ಮಾರ್ಕೆಟ್ ಯಾರ್ಡ್‌ಗೆ ಪೋಲೀಸ್ ಠಾಣೆ ಮಂಜೂರಾಗಿದೆ ಎನ್ನುವುದು ನಿಜವಲ್ಲವೇ ?

ಆ) ಹಾಗಾದರೆ ಪೋಲೀಸ್ ಠಾಣೆ ತೆರೆಯಲು ಸರ್ಕಾರ ತೆಗೆದುಕೊಂಡ ಕ್ರಮವೇನು ?